**ಎಂ ವಿ ಸಿ 517/2023 ಪಿ ಡಬ್ಲ್ಯೂ-1**

ದಿನಾಂಕ: 11.09.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಬಿ ಐ ವಕೀಲರಿಂದಃ**

ನನಗೆ ಓದಲು ಬರೆಯಲು ಬರುತ್ತದೆ. ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ನ್ಯಾಯಾಲಯಕ್ಕೆ ಖುದ್ದಾಗಿ ಬಂದಿದ್ದೇನೆ. ನ್ಯಾಯಾಲಯಕ್ಕೆ ಹಾಜರು ಪಡಿಸಿದ ದಾಖಲೆಗಳನ್ನು ಹೊರತು ಪಡಿಸಿ ಬೇರೆ ದಾಖಲೆಗಳು ಇಲ್ಲ. ಈ ಅಪಘಾತ 08.12.2016 ರಲ್ಲಿ ಆಗಿದೆ ಎಂದರೆ ನಿಜ. ಈ ಅರ್ಜಿಯನ್ನು ತಡವಾಗಿ ಸಲ್ಲಿಸಲು ಕಾರಣಗಳನ್ನು ಹೇಳಿಲ್ಲ. ನಾನು, ನನ್ನ ತಂದೆ, ನನ್ನ ತಂಗಿ ಮತ್ತು ಅತ್ತೆ ಎತ್ತಿನ ಗಾಡಿಯಲ್ಲಿ ಹೋಗುತ್ತಿದ್ದೆವು. ಎತ್ತಿನ ಗಾಡಿಯನ್ನು ನನ್ನ ತಂದೆ ಓಡಿಸುತ್ತಿದ್ದರು. ಎತ್ತುಗಳು ನಮಗೆ ಸೇರಿದ್ದವು. ಎತ್ತುಗಳನ್ನು ಖರೀದಿ ಮಾಡಿದ್ದಕ್ಕೆ ದಾಖಲೆಗಳು ಇರುವುದಿಲ್ಲ . ಎತ್ತುಗಳಿಗೆ ಇನ್ಸುರೆನ್ಸ್ ಮಾಡಿಲ್ಲ.ಎತ್ತಿನ ಗಾಡಿಗೆ ರಾಗಿ ಮಿಷನ್ ಅಳವಡಿಸಿಕೊಂಡು ಹೋಗುತ್ತಿದ್ದೆವು. ಆ ಮಿಷನ್ ಬೇರೆಯವರಿಗೆ ಸೇರಿದೆ. ಅಪಘಾತ ವಿ ವಿ ಪುರ ರಸ್ತೆಯಲ್ಲಿ ಆಗಿದೆ ಎಂದರೆ ನಿಜ. ಆ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಚಾಲನೆ ಮಾಡುತ್ತವೆ ಎಂದರೆ ನಿಜ. ಎತ್ತಿನ ಗಾಡಿಯನ್ನು ರಸ್ತೆಯ ಮಧ್ಯ ಭಾಗದಲ್ಲಿ ಓಡಿಸುತ್ತಿದ್ದರಿಂದ ಅಪಘಾತವಾಗಿದೆ

ಎಂದರೆ ಸರಿಯಲ್ಲ. ನಾನು ಸರ್ಕಾರಿ ಆಸ್ಪತ್ರೆಯಲ್ಲಿದ್ದಾಗ ದೂರು ಕೊಟ್ಟಿರುತ್ತೇನೆ. ಆಸ್ಪತ್ರೆಯಲ್ಲಿ ಎಂ ಎಲ್ ಸಿ ಬರೆದುಕೊಂಡಿರುತ್ತಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ದಿನ ಇದ್ದೆ. ನಂತರ ದಾವಣಗೆರೆ ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿ ಒಂದು ವಾರ ಇದ್ದೆ . ಆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನಗೆ ಮೂಳೆ ಮುರಿತ ಆಗಿರುತ್ತದೆ. ರೂ.15 ಸಾವಿರ ಖರ್ಚು ಮಾಡಿದ ದಾಖಲೆ ಹಾಜರು ಪಡಿಸಿಲ್ಲ. ನಾನು ಕೂಲಿ ಕೆಲಸ ಮಾಡುತ್ತಿದ್ದೆ. ಈಗ ನನಗೆ ಕೆಲಸ ಮಾಡಲು ಆಗುವುದಿಲ್ಲ.

ಕೂಲಿ ಕೆಲಸದಿಂದ ರೂ.10 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ತೋರಿಸಲು

ದಾಖಲೆ ಹಾಜರು ಪಡಿಸಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರು ಚಾಲಕನ ತಪ್ಪಿನಿಂದ ಆಪಘಾತವಾಗಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು